**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಲಯ, ರಾಣೇಬೆನ್ನೂರು.**

**MVC No. 1715/2023.**

ಸಾಕ್ಷಿದಾರರ ಹೆಸರು : ಎಂ ಎನ್ ಸಲೀಂ ಅಹಮ್ಮದ್ ಖಾನ್ ***P.W-2***

ತಂದೆಯ ಹೆಸರು : ನಜೀರ್ ಅಹ್ಮದ್ ಖಾನ್

ವಯಸ್ಸು : 57 ವರ್ಷ

ಉದ್ಯೋಗ : ಆಟೋ ಮೊಬೈಲ್ ಇಂಜಿನಿಯರ್ , ಪ್ರೋಪ್ರಿಯೇಟರ್ ಸಾಗರ್ ಮೋಟರ್ಸ ಪಿಬಿ ರೋಡ್ ದಾವಣಗೆರೆ.

ವಾಸ : ದಾವಣಗೆರೆ.

**ದಿನಾಂಕಃ 07-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

1. ಅರ್ಜಿದಾರರಿಗೆ ಸಂಬಂಧ ಪಟ್ಟ ಕೆ ಎ 35 ಇಪಿ 7458 ಹೊಂಡಾ ಶೈನ್ ಮೋಟಾರ್ ಸೈಕಲ್ ಅಪಘಾತ ದಲ್ಲಿ ಜಖಂ ಗೊಂಡಿದ್ದು ಅದನ್ನು ನಮ್ಮ ಗ್ಯಾರೇಜ್ ನಲ್ಲಿ ರಿಪೇರಿ ಮಾಡಿರುತ್ತೇನೆ. ಆ ಬಗ್ಗೆ ನಿಪಿ-8 ಬಿಲ್ ನ್ನು ನಾನೇ ಕೊಟ್ಟಿರುತ್ತೇನೆ. ನಿಪಿ-8 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

1. ಸದರಿ ವಾಹನ ಹೊಂಡಾ ಶೈನ್ ವಾಹನ ಆಗಿರುತ್ತದೆ. ನಿಪಿ-8 ರಲ್ಲಿ ಜಿ ಎಸ್ ಟಿ ನಂಬರ್ ಇರುವುದಿಲ್ಲ ಸಾಕ್ಷಿ ಮುಂದುವರೆದು ಜಿ ಎಸ್ ಟಿ ನಮಗೆ ಲಾಗು ಆಗುವುದಿಲ್ಲ ಎಂದು ಹೇಳುತ್ತಾರೆ. ಇಪ್ಪತ್ತು ಲಕ್ಷಕ್ಕಿಂತ ಮೇಲೆ ವ್ಯವಹಾರ ಇದ್ದರೆ ಮಾತ್ರ ಜಿ ಎಸ್ ಟಿ ಅನ್ವಯ ಆಗುತ್ತದೆ. ನಿಪಿ-8 ವಾಹನದ ರಿಪೇರಿಗೆ ಮಾತ್ರ ಸಂಬಂಧಿಸಿದೆ ಹೊರತು ಅದರಲ್ಲಿ ಯಾವುದೆ ಬಿಡಿ ಭಾಗದ ಮೊತ್ತ ಸೇರಿಲ್ಲ ಎಂದರೆ ಸರಿ. ಹಿರೋ ಹೊಂಡಾ ಬಿಡಿ ಭಾಗಗಗಳನ್ನು ಶೋ ರೂಂ ನಿಂದಲೇ ಖರೀದಿಸಬೇಕು ಎಂಬ ನಿಯಮ ಇಲ್ಲ, ಕಂಪನಿಯವರು ಡೀಲರ್ ಶಿಪ್ ಕೊಟ್ಟಿರುತ್ತಾರೆ ಅವರಿಂದ ಬಿಡಿ ಭಾಗ ಖರೀದಿಸಿರುತ್ತೇವೆ . ನಿಪಿ-8 ರಲ್ಲಿ ಸ್ಪೇರ್ಸ ಮತ್ತು ಸರ್ವಿಸ್

ಎಂದು ಇದ್ದು, ನಾವು ಯಾವುದೇ ಬಿಡಿ ಭಾಗ ಮಾರಾಟ ಮಾಡುವುದಿಲ್ಲ, ಬೇರೆ ಕಡೆಯಿಂದ ಬಿಡಿ ಭಾಗ ಖರೀದಿಸಿ ತಂದು ರಿಪೇರಿ ಮಾಡುತ್ತೇವೆ. ಸಾಮಾನ್ಯವಾಗಿ ಯಾವುದೇ ಒಂದು ವಾಹನ ಜಖಂ ಆದರೆ ಸದರಿ ಕಂಪನಿಯ ಸರ್ವಿಸ್ ಸ್ಟೇಶನ್ ನಲ್ಲಿ ಬಿಟ್ಟು ವಾಹನ ರಿಪೇರಿ ಮಾಡಿಸುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹೀರೋ ಹೊಂಡಾ ಶೋ ರೂಂ ನಲ್ಲಿ 4 ವರ್ಷ ಕೆಲಸ ಮಾಡಿರುತ್ತೇನೆ. ಕಂಪನಿಯಲ್ಲಿನ ಸರ್ವಿಸ್ ಗೂ ಹಾಗೂ ನಮ್ಮ ಸರ್ವಿಸ್ ಗೂ ಬೆಲೆಯಲ್ಲಿ ಬಹಳ ವ್ಯತ್ಯಾಸ ಇರುತ್ತದೆ ಎಂದು ಹೇಳುತ್ತಾರೆ. ಅರ್ಜಿದಾರರು ಕಂಪನಿಯಲ್ಲಿ ಸರ್ವಿಸ್ ಮಾಡಿಸಿಕೊಂಡು ಅವರ ವಿಮಾ ಕಂಪನಿಯಿಂದ ಓನ್ ಡ್ಯಾಮೇಜ್ ಕ್ಲೈಮ್ ಮಾಡಿಕೊಂಡಿದ್ದು, ಈ ಅರ್ಜಿ ಸಲ್ಲಿಸುವುದಕ್ಕಾಗಿ ನಿಪಿ-7 ಮತ್ತು 8 ನ್ನು ನನ್ನ ಕಡೆಯಿಂದ ಸೃಷ್ಠಿ ಮಾಡಿಸಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕೆ ಎ 35 ಇ ಪಿ 7458 ಮೋಟಾರ್ ಸೈಕಲ್ ನಾನು ಯಾವುದೇ ಸರ್ವಿಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ದಾಖಲೆಗಳು ಪರಿಹಾರಕ್ಕಾಗಿ ಸೃಷ್ಠಿ ಮಾಡಿಕೊಟ್ಟ ದಾಖಲೆಗಳು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲವಾಗಲಿ ಎಂದು ಅವರೊಂದಿಗೆ ಮಿಲಾಪೆಯಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.